Daily & Weeky SATYAVADI Foundcd 1917

Regd. No. M 1299 ಎ ಸೆಕ್ಷ್ ೩ ಪೈ

ಸತ್ಯವಾದಿ

ಸಂಚಿಕೆ 26 (ಶನಿವಾರ 14—11—1942 (ಸಂಪುಟ 48

ತಾಮ್ರದ ನಾಣ್ಯಗಳೆಲ್ಲ ಎಲ್ಲಿ ಅಡಗುವುವು ?

ಹೋಟಲಿನ ಬಾಗಲಲ್ಲೇ ' ಚಿಲ್ಲರೆ ಸಿಕ್ಕುವುದಿಲ್ಲ ' ' ಆಣೆಗಳಿಗೆ ಸರಿಯಾಗಿ ವ್ಯಾಪಾರ ಮಾಡಿ ಮುಂತಾದ ಪ್ರಕಟಣೆಗಳು ಈಚೆಗೆ ಅಧಿಕವಾಗಿವೆ. ಈ ಪ್ರಕಟಣೆಗಳು ಒಂದು ರೀತಿಯಲ್ಲಿ ಗಿರಾಕಿಗೆ ಚಿಲ್ಲರೆಯನ್ನೇ ತಂದು ತಿನ್ನಬೇಕೆಂದು ವಿಧಿಸುವುದೆಂದರೂ ಅನುಚಿತವಾಗಲಾರ

ತ್ತ ದೇಶದಲ್ಲಂತೂ ತಾಮ್ರದ ನಾ
ಮವೇ ಪ್ರಾಸ್ತವಾದಂತಿರುವ
ಳಲಾಗಿದೆ. ಅನೇಕ ಕಡೆ
ಆದ ಕೂಪನ್ನುಗಳನ್ನೇ ಚಿಲ್ಲರೆ
ಕಾಗಿ ಸೃಜಿಸಿದರು. ಇಂತಹ ಕೂಪನ್ನು
ಕೋಟಿಗಟ್ಟಲೆಯ ಬಡವರ ಒಂದಾಣೆಗೆ 11
ನ್ನು ಒದಗಿಸಲು ಅಸಮರ್ಥವೆನ್ನಬಹುದು.
ಕಾಸು ಮರಗೆವಾಯುವಾದರೂ ಹೇಗಾಯಿತೆನ್ನುವುದಕ್ಕೆ ಇರುವ ಸಮಾಧಾನವೆಂದರೆ ತಾಮ್ರಕ್ಕಾಗಿ ನಾಣ್ಯಗಳು ಕರಗಿಸಲಾಗುತ್ತಿದೆ ಎಂಬುದು. ಈ ಯುದ್ಧ ನೊವೆಲಾದಂದಿನಿಂದ ಕಳೆದ ಮಾರ್ಚಿವರೆಗೇ 8 ಕೋಟಿ ಬೆಲೆಬಾಳುವ ನಾಣ್ಯಗಳು ಚಲಾಯಿಸಲಾದುವು. ಅದೇ ಕಳೆದ ಯುದ್ಧ ಸಮಯದಲ್ಲಿ ಒಟ್ಟು 5 ಕೋಟಿ ಮಾತ್ರ ಚಲಾವಣೆಗೆ ತರಲಾಗಿತ್ತು. ಇತ್ತೀಚೆಗೆ ಸುಮಾರು 13 ಲಕ್ಷ ಬೆಲೆಯ ತಾಮ್ರದ ನಾಣ್ಯಗಳು ಕಾಣದಂತಾಗಿವೆಯೆಂದು ತಿಳಿಯಬಂದಿದೆ. ಹೀಗೆ ಆಗಿರುವುದಕ್ಕೆ ಲೋಹದ ವೆಚ್ಚೆಯಲ್ಲಿ ಅದಕ್ಕಿರುವ ಅಧಿಕ ಮೌಲ್ಯವೇ ಕಾರಣವಾಗಿದ್ದೀತು. ಬೊಂಬಾಯಿನ ಒಬ್ಬ ಪತ್ರಿಕಾ ಲೇಖಕನ ಲೆಕ್ಕದಂತೆ 135 ರೂಪಾಯಿ ಬೆಲೆಯ ಮೂರು ಕಾಸುಗಳನ್ನು ಕೂಡಿಸಿದರೆ 200 ರೂಪಾಯಿ ಬೆಲೆಯಾಗುವುದು. ಇದಕ್ಕೆ ಸಿಯಾದ ಏನಾದರೊಂದು ಗತಿಯನ್ನು ಕಲ್ಪಿಸುವುದು ತುರ್ತಾದ ಅವಶ್ಯಕವು

ರಣರಂಗದ ಸಂಗತಿ

ಸ್ಟಾಲಿಗ್ರಾಡಿನಲ್ಲಿ ಹೊಡೆದಾಟ ಕಮ್ಮಿಯಾಗಿದ್ದಿತು. ಆದರೆ ಜರ್ಮನರು ಹೊಸ ಸೈನ್ಯಗಳನ್ನು ತಂದು ಒಂದು ಭಾಗ ಮತ್ತೆ ಮುತ್ತಿರುವರು. ಅವರ ಒತ್ತಾಯ ಹೆಚ್ಚಾಗಿದೆ. ನೊವೋರೊಸಿಸ್ಕ್‌ನಲ್ಲಿ ರಷ್ಯನರು ಮುನ್ನುಗ್ಗುತ್ತಿದ್ದಾರೆ.

ಮಿತ್ರಮಂಡಲಿಯವರು ಟ್ಯೂನಿಸ್ಸಿನ ಮೇಲೆ ಧಾಳಿ ನಡೆಸಿದಾರೆ. ೨೦ ಆಕ್ಸಿಸ್ ವಿಮಾನಗಳು ಧ್ವಂಸ ಮಾಡಲಾಗಿದೆ.

ಇಟಲಿ ಕಡೆಗೆ ಬಲ್‌ಗೇರಿಯಾ ಮತ್ತು ರೊಮೇನಿಯಾದ ರೈಲುಗಳೂ ಜರ್ಮನ್ ಸೋಲ್ಜರುಗಳಿಂದ ಕೂಡಿ, ಬರುತ್ತಿರುವುದಾಗಿ ವರ್ತಮಾನ

ಪ್ಯಾಕೆಟ್ ಒಂದಕ್ಕೆ ೨ ಆಣೆ, ಹತ್ತು ಪ್ಯಾಕೆಟ್‌ನ ಪೆಟ್ಟಿಗೆ ೧-೪-೦.
ಎಲ್ಲಾ ಕೆಮಿಸ್ಟರಲ್ಲೂ ದೊರೆಯುತ್ತೆ.

ಹೊಸಹೊಸ ಸಮಾಚಾರ

ಡೆಲ್ಲಿಯಲ್ಲಿಯ ಒಂದು ಮನೆಯನ್ನು ಜೈನೀಸ್ ಕಮ್ಯೂನಿಸ್ಟರ ಉಪಯೋಗಕ್ಕಾಗಿ ಬೇಕೆಂದು ಸರಕಾರದವರು ಕೋರಿದ್ದರು. ಆದರೆ ಮನೆ ಮಾಲೀಕನು ಕೊಡದೆ ಮನೆಯನ್ನು ತನ್ನ ಸುಪರ್ದಿನಲ್ಲಿಟ್ಟುಕೊಂಡುದಕ್ಕಾಗಿ ಅವನ ಮೇಲೆ ಡಿಫೆನ್ಸ್ ರೂಲ್ಸ್ ಮೇರೆ ಮೊಕದ್ದಮೆ ರಿಜಿಸ್ಟರ್ ಮಾಡಿಕೊಳ್ಳಲಾಗಿದೆ ಯೆಂದು ತಿಳಿಯ ಬಂದಿದೆ.

ಮಿ|| ಜಿನ್ನಾರವರು ಪತ್ರಿಕೋದ್ಯೋಗಿಗಳನ್ನು ಲಾ ಹೋರಿನಲ್ಲಿ 20 ನೇ ತಾರೀಖಿನ ಪತ್ರಿಕೋದ್ಯೋಗಿಗಳ ಸಮ್ಮೇಳನದಲ್ಲಿ ಭೇಟಿಮಾಡುವರು.

ಸಿಂಧಿನಿಂದ ಕ್ವಿನೈನನ್ನು ಭೂಮಿ ಮೂಲಕ ಸಮುದ್ರ ಮೂಲಕ, ಸಾಗಿಸಬಾರದೆಂದು ಡಿಫೆನ್ಸ್ ರೂಲ್ ಮೇರೆ ಅಲ್ಲಿ ಸರ್ಕಾರದ ಆಜ್ಞೆಯಾಗಿರುವುದಾಗಿ ತಿಳಿಯ ಬಂದಿದೆ.

ಲಕ್ನೋವಿನ ಪಟ್ಟಣದ ಮಧ್ಯದಲ್ಲಿರುವ ಒಂದು ಬ್ಯಾಂಕಿನಲ್ಲಿ ಹಗಲಿನಲ್ಲೇ ದರೋಡೆ ನಡೆದು, ದರೋಡೆಗಾರರು ಬಾಂಕಿನ ನೌಕರರನ್ನು ಪಿಸ್ತೂಲಿನಿಂದ ಹೆದರಿಸಿ ಸಾವಿರ ರೂಪಾಯಿಯೊಡನೆ ಪರಾರಿಯಾದರು.

ವೈಸರಾಯರವರು ಶ್ರೀ ರಾಜಗೋಪಾಲಾಚಾರ್ಯರಿಗೆ ಗಾಂಧೀಜಿಯವರನ್ನು ನೋಡಲು ಅವಕಾಶವನ್ನು ತಿರಸ್ಕರಿಸಿದ್ದು ಯುಕ್ತವಾದುದಲ್ಲವೆಂದು ಅನೇಕ ಮುಖಂಡರ ಅಭಿಪ್ರಾಯವಾಗಿದೆ.

ಭೇಮಾವಂದ ಕೆಲ ಹಳ್ಳಿಗಳ ಮೇಲೆ ಪುಂಡು ಕಂದಾಯ ವಿಧಿಸಲಾಗಿದೆ.

ಅಹಮದಾಬಾದಿನ ಕಲುಪುರದಲ್ಲಿ ಹೆತ್ತೋಟಿಗೆ ಬಾರದ ಮತ್ತು ಕಲ್ಲು ಎಸೆಯುತ್ತಿದ್ದ ದೊಂಬಿಗಾರರ ಮೇಲೆ 12 ನೇ ತಾರೀಖು ಗುಂಡು ಹಾರಿಸಲಾಯಿತೆಂದೂ, ಏನೂ ಸಾವುನೋವಾಗಲಿಲ್ಲವೆಂದೂ ತಿಳಿಯ ಬಂದಿದೆ.

ಇಂಡಿಯಾದಲ್ಲಿ ಬ್ರಿಟಿಷ್ ಬಂಡವಾಳ 300 ಮಿಲಿಯ ಪೌಂಡುಗಳಷ್ಟು ಹಾಕಲಾಗಿದೆಯೆಂದೂ, ಇಂಡಿಯ[illegible] ಬ್ಯಾಂಕು ಆಗಲೇ ಬ್ರಿಟನ್ನಿನ ಸ್ಟೆರ್ಲಿಂಗ್ ನಿಧಿ 300,000,000 ಪೌಂಡು ಹಾಕಿರುವುದೆಂದೂ ಮ್ಯಾಂಚಸ್ಟಾರ್ ಗಾರ್ಡಿಯನ್ ಪತ್ರಿಕೆಯ ಹಣಕಾಸಿನ ಕಲಂನಲ್ಲಿ ಪ್ರಕಟಿಸಲಾಗಿದೆಯೆಂದು ತಿಳಿಯ ಬಂದಿದೆ.

ವರ್ತಮಾನ ಪ್ರಕಟಣೆ ವಿಷಯದಲ್ಲಿ ಪತ್ರಿಕೆಗಳ [illegible] ಲೆ ವಿಧಿಸಿದ್ದ ಪ್ರತಿಬಂಧಕವನ್ನು ಬೊಂಬಾಯಿ ಸರಕಾರವು ತೆಗೆದುಹಾಕಿದೆ.

ಮೈಸೂರು ರಾಜಧಾನಿಯ ಟೌನ್‌ಹಾಲಿನ ರಿಪೇರಿಗಾಗಿ 45 ಸಾವಿರ ರೂಪಾಯಿ ವ್ಯಯ ಮಾಡಲು ಕಳೆದ ಎಸೆಂಬ್ಲಿಯಲ್ಲಿ ಅನುಮೋದಿಸಲಾಗಿದೆ

ಅಕ್ಯಾಬ್ ವೇಲೆ ಆರ್. ಎ. ಎಫ್. ಧಾಳಿ ನಡೆಸಿ ಎರಡು ಶತ್ರು ಸರಬರಾಯಿ ಹಡಗನ್ನು ನಷ್ಟಪಡಿಸಿದೆ.

ಅಲೂಷಿಯದಲ್ಲಿ ಅಮೇರಿಕಾದವರು ದಾಳಿ ನಡೆಸಿ, ಜಪಾನ್ ಹಡಗನ್ನು ನಾಶಮಾಡಿದ್ದಾರೆ

ಬ್ರಿಟನ್ನಿನಿಂದ ರಷ್ಯಾಕ್ಕೆ ವಿಮಾನಗಳು, ಟ್ಯಾಂಕುಗಳೂ, ವಾಹನಗಳು, ಮೆಷಿನ್ ಸಾಮಗ್ರಿ ಆಹಾರ ಪದಾರ್ಥ, ಔಷಧ ಸಾಮಾನುಗಳು ಕಳುಹಿಸುತ್ತಿರುವುದಾಗಿ ತಿಳಿಯ ಬಂದಿದೆ.

Edited Printed & Published by M. S, Krishna Rao, at the Satyavadi Press, Chamaraja Agrahar, Mysore.

ಈ ವಾರದ ಭವಿಷ್ಯ

ಕೃಷ್ಣಾಪುರದ ವೆಂಕಟನರಸಿಂಹಾಚಾರ್
ಶ್ರೀ ರಾಮಕೃಷ್ಣ ಜ್ಯೋತಿಷಾಲಯ

ಮೇಷ

ಈ ವಾರ ಫಲ ಕಡಮೆ, ನಿಷ್ಠೂರ ಚಂಚಲತೆ ಲಾಭಕಾರ್ಯವಿಲ್ಲ ಅನಾರೋಗ್ಯ. ಸೂರ್ಯನಮಸ್ಕಾರ ಮಾಡಿ ಉತ್ತಮ ತಾ|| 19, 20 ಫಲ ಉತ್ತಮ.

ವೃಷಭ

ಈ ವಾರ ಅಷ್ಟೇನೂ ಉತ್ತಮ ಫಲ ಕಂಡು ಬರಲಿಲ್ಲ. ಸ್ವಜನ ವಿರೋಧ ವ್ಯಯಾಧಿಕ ಎಂದಿನಂತೆ ಇರುತ್ತೆ. ರಾಜಕೀಯ ಜನರಲ್ಲಿ ನಿಷ್ಠೂರ ವಿದ್ಯಾಭಂಗ ಪಿತೃಹೃದಯ ಪಾರಾಯಣ ಎಳ್ಳು ದಾನ ಮಾಡಿ ಸುಖ ಫಲ. ತಾ|| 18, 19, ಉತ್ತಮ ಫಲ.

ಮಿಥುನ

ನಿಮಗೆ ಉತ್ಸಾಹಾಧಿಕ ಕಾರ್ಯದಲ್ಲಿ ದಕ್ಷತೆ ಗೌರವ ಪುಣ್ಯಕಾರ್ಯದಲ್ಲಿ ಆಸಕ್ತಿ ಗೃಹಾಭಿವೃದ್ಧಿ ಸ್ತ್ರೀಪುತ್ರ ಸೌಖ್ಯತೆ ಶುಭವಾರ್ತಾ ಭೂ ವ್ಯವಸಾಯದಲ್ಲಿ ಫಲಸಿದ್ಧಿ.

ಕರ್ಕಾಟಕ

ನಿಮಗೆ ಎಂದಿನಂತೆ ಶತ್ರುಗಳು ಮುಂದಾಗಿ ಇರುವರು ಲಾಭ ಕಾರ್ಯದಲ್ಲಿ ಅಸುಖ ರಾಜಕೀಯ ಜನರಲ್ಲಿ ವಿರೋಧ. ಚಂಚಲತೆ, ಸಹಸ್ರನಾಮಾರ್ಚನೆ ಮಾಡಿಸಿ ಕಡಲೇ ದಾನ ಕೂಡಿ ತಾ|| 19, ಫಲ ಉತ್ತಮ ಸುಖಾಧಿಕ.

ಸಿಂಹ

ನಿಮ್ಮ ಬಂಧು ಮಿತ್ರಾದಿಗಳಿಂದ ಸೌಖ್ಯತೆ ಭೂ ಸ್ಥಿತಿಯಿಂದ ಫಲಸಿದ್ಧಿ ಪುಣ್ಯಾರ್ಜನೆ ಫಲ ಸಮುದಾಯ ಕಾರ್ಯದ ಸೌಖ್ಯತೆ ಉತ್ಸಾಹಾಧಿಕ ತಾ|| 18, 19, 29 ವಿರೋಧ ಫಲ ಸಮುದಾಯ ಕಾರ್ಯದಲ್ಲಿ ಮುಂದಾಗಿ ಪ್ರವೇಶಿಸಬಾರದು ಚಂಚಲ ಅನಾರೋಗ್ಯ ಬ್ರಹ್ಮಚಾರಿಗೆ ವಸ್ತ್ರದಾನ ಮಾಡಿ ಫಲ ಉತ್ತಮ.

ಕನ್ಯಾ

ಫಲ ಉತ್ತಮ ಉತ್ಸಾಹಕಾರ ಶುಭವಾರ್ತಾ ಗೃಹಾಭಿವೃದ್ಧಿ ರಾಜಕೀಯ ಜನರಲ್ಲಿ ಗಣ್ಯತೆ ಧರ್ಮದಲ್ಲಿ ಆಸಕ್ತಿ. ಸ್ತ್ರೀಪುತ್ರ ಸೌಖ್ಯತೆ ಲಾಭಾಧಿಕ.

ತುಲಾ

ಚಂಚಲತೆ ಎಂದಿನಂತೆ ಇದೆ. ಲಾಭ ಕಡಮೆ ವ್ಯಯಾಧಿಕ ನೀಚವರ್ಗ ವಿರೋಧ ಪುಣ್ಯಕಾರ್ಯದಲ್ಲಿ ಆಸಕ್ತಿ ಕಡಮೆ. ಅನಾರೋಗ್ಯ ತೊಗರೀಬೇಳೆ ದಾನ ಕೊಡಿ ಉತ್ತಮ.

ವೃಶ್ಚಿಕ

ಈ ವಾರದಲ್ಲಿ ನಿಮಗೆ ಮಿಶ್ರಫಲ. ಸಂಘಕಾರ್ಯದಲ್ಲಿ ಮುಂದಾಗಿ ಪ್ರವೇಶಿಸಬಾರದು. ಶತ್ರುವು ಮುಂದಾಗಿ ಇರುವದು ನಿಷ್ಠೂರ ಭಾಷಣಕ್ಕೆ ಅವಕಾಶಕೊಡಬಾರದು. ವ್ಯಯಾಧಿಕ ಬಂಧುವಿರೋಧ ಭೂವ್ಯವಸಾಯ ಫಲ ಉತ್ತಮ. ಗೃಹಾಭಿವೃದ್ಧಿ ಈ ವಾರ ಆದಿತ್ಯಹೃದಯ ತೊಲಸೀ ಪೂಜಾ ಮಾಡುವುದುಂದ ಕ್ಷೇಮ.

ಧನು

ಸೂರ್ಯನು ವ್ಯಯಕ್ಕೆ ಬಂದರೂ ಮಿತ್ರತ್ವ ಉತ್ತಮವಾಗಿರುತ್ತೆ. ಸೌಖ್ಯತೆ ಗೃಹಾಭಿವೃದ್ಧಿ ಲಾಭಕಾರ್ಯ ಉತ್ಸಾಹ ಯೆಂದಿನಂತೆ ಇರುತ್ತೆ. ರಾಜಕೀ ಕಾರ್ಯದಲ್ಲಿ ಮುಂದಾಗಿ ಪ್ರವೇಶಿಸಬಾರದು. ನೀಚರನ್ನು ದೂರಮಾಡಬೇಕು. ತಳಸೀ ಕ್ಷೀರವನ್ನು ಬಿಡಿ ಫಲ ಇನ್ನು ಉತ್ತಮ.

ಮಕರ

ನಿಮ್ಮ ಕಾರ್ಯ ದಕ್ಷತೆ ಗೌರವ ಭೂವ್ಯವಸಾಯ ಫಲ ಸಿದ್ಧಿ ಯೆಂದಿನಂತೆ ಇದೆ ಶುಭವಾರ್ತಾ ಸನ್ಮಾನ ಸೌಖ್ಯ ಪುಣ್ಯಕಾರ್ಯ ಗೃಹಾಭಿವೃದ್ಧಿ ಈ ವಾರ ಗೋಪೂಜೆ ಮಾಡಿ ಇನ್ನೂ ಉತ್ತಮ ವಿರುತ್ತೆ.

ಕುಂಭ

ನಿಮಗೆ ತಾಪತ್ರಯ ಕಮ್ಮಿಗೆ ಬರುತ್ತೆ. ಶತ್ರು ದೂರವಾಗುವರು. ಆರೋಗ್ಯ ಉತ್ತಮ ಬಂಧು ಮಿತ್ರಾದಿ ಸಮಾಗಮ ದೊಡ್ಡವರ ಆಶ್ರಯ ದೇವತಾ ಸೇವಾ ಫಲ ತಾ|| 16 ಕುಜ ಪ್ರೀತಿ ಈತ ಪ್ರೀತಿ ಮಾಡಿಕೊಳ್ಳಬೇಕು. ವೇದಾದೋ ಸವಿರುತ್ತೆ.

ಮೀನ

ತಾ|| 16, 17, 20 ನಿಮಗೆ ಉತ್ತಮ ಫಲವಿಲ್ಲ, ಚಂಚಲತೆ, ನಿಷ್ಠೂರ ವ್ಯಯಾಧಿಕ ಅನಾರೋಗ್ಯ ಸೂರ್ಯ ನಮಸ್ಕಾರ ಮಾಡಿ ಉಳಿಕೆ ದಿವಸ ಫಲ ಉತ್ತಮ. ಗೃಹಾಭಿವೃದ್ಧಿ ಕಾರ್ಯದಲ್ಲಿ ದಕ್ಷತೆ ಗೌರವ ಆಪ್ತಬಂಧು ದರ್ಶನ ಉತ್ಸಾಹ ಕಾರ್ಯ.

ಆತ — ಇದೇನೇ ಒಟ್ಟಿಲಿ ತುಂಬಿಟ್ಟಿದೋದು?

ಈಕೆ—ಗಟ್ಟಿಯಾಗಿ ಕೂಗ್ಬೇಡ್ರಿ! ನೆರೆಮನೆಯವರ ಹಿಟ್ಟಲ್ಲಿಕಾಯಿ.

ವಿನೋದಲಹರಿ

(ಲೇ.—ಎಂ. ಎಸ್. ಕಮಲಮ್ಮಾಳ್)

ಯುವಕ—ನಾನು ನಿನಗೋಸ್ಕರ ಪ್ರಾಣ ಕೊಡುತ್ತೇನೆಂದರೂ ಸಹ ನೀನು ಒಂದು ಬಾರಿಯಾದರೂ ನಿನ್ನ ಪ್ರೇಮ ಕಟಾಕ್ಷವನ್ನು ನನ್ನ ಮೇಲೆ ಬೀರುವುದಿಲ್ಲ.

ಯುವತಿ—ಏಲಿ ನೀನು ನನಗಾಗಿ ಪ್ರಾಣ ಕೊಟ್ಟಮೇಲಲ್ಲವೇ ನಾನು ನಿನ್ನ ಕಟಾಕ್ಷ ಬೀರುವುದು.

ಂ ಂ ಂ

ಗುರು—ಹುಡುಗರಿಗಾ ನಾನು ಕಷ್ಟಪಟ್ಟು ಪಾಠ ಹೇಳಿಕೊಡುತ್ತೇನೆ. ಆದ್ದರಿಂದ ನನಗೆ ನೀವು ಗುರು ದಕ್ಷಿಣೆ ಕೊಡಬೇಕು.

ಕಿಟ್ಟು—ಸಾರ್, ಈವತ್ತಿನಿಂದ ನನಗೆ ಪಾಠ ಹೇಳಿಕೊಡಬೇಡಿ. ನಿಮಗೆ ಕಷ್ಟ ತಪ್ಪುತ್ತೆ, ಆದ್ದರಿಂದ ನೀವು ಶಿಷ್ಯ ದಕ್ಷಿಣೆಯನ್ನು ಕೊಡಬೇಕು.

ಂ ಂ ಂ

ಸರೋಜಮ್ಮ—ರೀ, ಕಮಲನ್ನ ನಿಮ್ಮರೇ ನೀವು ನನಗೆ ಒಂದು ಶಾಂತಾಪಟ್ಟೆ ಪೋಟೋ ಕೊಟ್ಟರೆ ನಾನು ನೀವು ಕೇಳಿದ್ದನ್ನು ಕೊಡುತ್ತೇನೆ

ಕಮಲಮ್ಮ—ಹಾಗಾದರೆ ನನಗೆ ಬಂದು ಸೇರು ಕೋಣನ ಹಾಲು ತಂದು ಕೊಡ್ತೀರಾ.

ಂ ಂ ಂ

ಮಾಧು—ಪರಂಗಿಯವರು ಟೊಪ್ಪಿಗೆ ತೆಗೆದು ಎಲ್ಲರಿಗೂ ಅದರಲ್ಲೂ ಹೆಂಗಸರಿಗೆ ಹೆಚ್ಚಾಗಿ ತಲೆಬಾಗಿಸುವ್ರದೆ ತಕ್ಕೆ.

ಶಂಭು—ಆಯ್ಯೋ! ಮಂಕೆ ಅಷ್ಟು ತಿಳಿಯದೆ, ತಾವು ಕ್ಯಾಪ್ ತಿದ್ದಿರುವುದನ್ನು ಹೆಂಗಸರು ನೋಡಿ ಮೋಹಗೊಳ್ಳಲೆಂದು.

ಂ ಂ ಂ

ಅಕೆ—ನಿನ್ನ ಕಣ್ಣು ನೋಯಿಗೆ ಏನು ಔಷಧಿ ಹಾಕಿದ್ದಿಯೇ?

ಈಕೆ—ಏನೂ ಇಲ್ಲ

ಅಕೆ—ಹಾಗಾದರೆ ಸ್ವಲ್ಪ ಟಿಂಚರ್ ಅಯೋಡೀಕ್ ಹಾಕಿಬಿಡು ಪುಣ್ಯಕ್ಕೆ ಕಣ್ಣೊಂದೇ ಒರೋದಿಲ್ಲ.

ಂ ಂ ಂ

ಹಿಂದೂದೇಶ

ಅಲ್ಲಾಬಕ್ಷರ ಅಧ್ಯಕ್ಷತೆಯಲ್ಲಿ ಸ್ವತಂತ್ರ ಮುಸ್ಲಿಮರ ಸಮ್ಮೇಳನವು ಡೆಲ್ಲಿಯಲ್ಲಿ ನಡೆದು, ಕೇಂದ್ರದಲ್ಲಿ ರಾಷ್ಟ್ರೀಯ ಸರಕಾರವು ಸ್ಥಾಪಿತವಾಗಲು ಒತ್ತಾಯ ಪಡಿಸುವನಿರ್ಣಯವನ್ನು ಮಂಜೂರ್ಮಾಡಲಾಯಿತು.

ಕಾಶ್ಮೀರದಲ್ಲಿ ಮಹವದೀಯರಿಗಿರುವ ತೊಂದರೆ ವಿಷಯಗಳು ಡೆಲ್ಲಿಯಲ್ಲಿ ನಡೆದ ಮುಸ್ಲಿಂ ಲೀಗ್ ಕೌನ್ಸಿಲ್ಲಿನಲ್ಲಿ ಚರ್ಚಿಸಲ್ಪಟ್ಟಿಲ್ಲವೆಂದೂ, ಸಂನ್ಯಾಸಗಳು ಪಾಕಿಸ್ತಾನದ ಹಂಚಿಕೆಗೆ ಒಳಪಟ್ಟಿಲ್ಲವೆಂದೂ, ಪ್ರೊ || ಜಿನ್ನಾರವರು ತಿಳಿಸಿದರೆಂದು ಪ್ರಕಟಿಸಲಾಗಿದೆ.

ಕಲ್ಕತ್ತಾದಲ್ಲಿನ ಹಲಸಿಭಜನ ಮಾರ್ಕೆಟ್ಟಿನಲ್ಲಿ ಕಾಳಿ ಪೂಜೆಗಾಗಿ ಹಾಕಿದ್ದ ಮಂಟಪಕ್ಕೆ ಬೆಂಕಿಬಿದ್ದು 130 ಮಂದಿ ಸುಟ್ಟು ಹೋದರು. 100 ಮಂದಿ ಕೆಚ್ಚಾ[illegible] ಯಕ್ಕೊಳಗಾಗಿದ್ದು ಇಲ್ಲಿಯವರೆಗೆ [illegible] ಅನಾಹುತ ನಡೆದೇ [illegible] ಒಂದಿದೆ. ವಿಷ[illegible]ರಲ್ಲಿ ಹೆಚ್ಚು ಮಂದಿ ಹೆಂಗ[illegible]ದು ತಿಳಿಯಬಂದಿದೆ.

ಬೆಳಗಾಂ ಬಾಗಲಕೋಟೆ ಸಂತೆಗಾಗಿ ಆಹಾರ ಪದಾರ್ಥ[illegible]ರಾಗಿ, ಜೇಳೆ ಮುಂತಾದುವನ್ನು ತಂದ್ದ 15 ಗಾಡಿಗಳನ್ನು, ಮುಖಕ್ಕೆ ಕಟ್ಟಿಯನ್ನು ಮುಚ್ಚಿಕೊಂಡಿದ್ದ ಬಂಗಂಪಿನವರು ಅಡ್ಡಗಟ್ಟಿ, ಗಾಡಿಯಲ್ಲಿನ್ನು ಹೊಡೆದು ಪದಾರ್ಥಗಳನ್ನು ಸಾಗಿಕೊಂಡು ಪರಾರಿಯಾಗಿರುವರು.

ಅಖಿಲ ಭಾರತ ಕಾಂಗ್ರೆಸ್ಸಿಗೆ ಸೇರಿದ ಮೆ || ಬಚಂಲಾಜ್ ಕಂಪೆನಿಯಲ್ಲಿದ್ದ 11395 ರೂಪಾಯೀಗಳನ್ನು ಬೊಂಬಾಯಿ ಸರ್ಕಾರದವರು ವಶಪಡಿಸಿಕೊಂಡಿರುವರೆಂದು ತಿಳಿಯಬಂದಿದೆ.

ಪೇಪರ್ ಕಂಟ್ರೋಲ್ ಆರ್ಡರನ್ನು ಇಂಡಿಯಾ ಸರಕಾರದವರು ಜಾರಿಗೆ ತಂದಿರುತ್ತಾರೆ.

ತಂಕಾಸ್ಸಿಯಲ್ಲಿ ಸಾವಿರ ಮಂದಿಗೆ ಮೇಲ್ಪಟ್ಟ ದೊಂಬಿಗಾರರ ಗುಂಪು 3-ಮಿಲ್ಲುಗಳಲ್ಲಿ ತುಂಬಿಬಿಟ್ಟಿದ್ದ ಅಕ್ಕಿ ಮತ್ತು ಭತ್ತದ ಮೂಟೆಗಳನ್ನು ಲೂಟಿ ಮಾಡಿತೆಂದೂ, 4 ನೇ ಮಿಲ್ಲಿನಲ್ಲಿ ಹೀಗೆ ಮಾಡಲು ಹೊಂಟಾಗ ಡೆ || ಪೋ || ಸೂಪರಿಂಟೆಂಡೆಂಟರು ಬಂದು 8 ಮಂದಿಯನ್ನು ಗುಂ ಮಾಡಿದರೆಂದೂ ತಿಳಿಯಬಂದಿದೆ.

ಭಾರತವನ್ನು ಮೊದಲು ಸ್ವತಂತ್ರ[illegible] ಮಾಡಿ, ಇದೇ ಯುದ್ಧವು ನೀತಿಯಾಗಿದೆ, ಎಂದು ಮಹಾತ್ಮಗಾಂಧಿಯವರ ಸತ್ಕಾರ್ಯವರು ಅರೆಸ್ಟ್ ಪಟ್ಟಿರುವರು.

ಹಾಲು ಪಾನೀಯಗಳು

ನಮಲಿ ಒಂದು ವಿಶೇಷವೆನಿಸಿ

ಕೆನೆ, ಬೆಣ್ಣೆ, ಅತಿ ಮಧುರವಾದ ಕ್ರೀಮ್, ಇವುಗಳಿಗೆ

ಈ ಕೆಳಗಿನ ಅಡ್ರೆಸ್ಸಿಗೆ ಈ ದಿನವೇ ಫೋನ್ ಮಾಡಿ

ಸಿಟಿಸನ್ನಿ ಡೈರಿ ಟೆಲಿಫೋನ್ ನಂಬರು 402

ಹಳೇ ಪೋಸ್ಟಾಫೀಸ್‌ರಸ್ತೆ, ಮೈಸೂರು